ಎಫ್.ಡಿ.ಪಿ.4/2017
ಪಿ.ಡಬ್ಲೂ.01

ದಿನಾಂಕ **01.10.2021** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು ವಕೀಲರಾದ ಶ್ರೀ.ವಿ.ವೆಂಕಟೇಶ್ ಭಾಷಾಂತಕರಾಗಿದ್ದು, ಅವರಿಗೂ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲು: ಶ್ರೀ.ಹೆಚ್?ಎಲ್?ಎನ್?, ವಕೀಲರಿಂದ ವಾದಿಯ ಪರವಾಗಿ:

ನಾನು ದ್ವಿತೀಯ ಪಿಯುಸಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ತೆಲುಗು ಓದಲು ಬರೆಯಲು ಬರುತ್ತದೆ. ಆಂಗ್ಲ ಭಾಷೆ ಓದಲು ಬರೆಯಲು ಬರುವುದಿಲ್ಲ. ನಾನು ಟ್ರೆಜರಿ ಆಫೀಸ್ ನಲ್ಲಿ ಸೀನಿಯರ್ ಅಕೌಂಟೆಂಟ್ ಆಗಿ ಕರ್ತವ್ಯ ಮಾಡುತ್ತಿದ್ದೇನೆ.

ಮೃತ ಬೇಕಮ್ಮನ ತಂದೆ ತಾಯಿ ಹೆಸರು ನನಗೆ ಗೊತ್ತಿರುವುದಿಲ್ಲ. ಮೃತ ಬೇಕಮ್ಮನ ಅಣ್ಣ ಮತ್ತು ತಮ್ಮನ ಹೆಸರು ಏನೆಂದು ಪ್ರಶ್ನಿಸಲಾಗಿ ಸಾಕ್ಷಿ ಚಿನ್ನಸ್ವಾಮಿ ಮತ್ತು ಸಿದ್ದಯ್ಯ ಎಂದು ನುಡಿಯುತ್ತಾರೆ. ಮೃತ ಸಿದ್ದಯ್ಯನಿಗೆ ಎಷ್ಟು ಜನ ಮಕ್ಕಳು ಎಂದು ಪ್ರಶ್ನಿಸಲಾಗಿ ಸಾಕ್ಷಿ 3 ಜನ ಎಂದು ನುಡಿಯುತ್ತಾರೆ. ಸದರಿಯವರು ರಾಮಮೂರ್ತಿ, ಮಣಿ ಮತ್ತು ಇನ್ನೊಬ್ಬರ ಹೆಸರು ಜ್ಞಾಪಕಕ್ಕೆ ಬರುತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಮುಂದುವರೆದು ಮುನಿರತ್ನ ಎಂದು ನುಡಿಯುತ್ತಾರೆ. ಸದರಿ ಚಿನ್ನಸ್ವಾಮಿ ಮರಣ ಹೊಂದಿರುತ್ತಾರೆ. ಚಿನ್ನಸ್ವಾಮಿಯ ಹೆಂಡತಿ ಮಕ್ಕಳು ಹೆಸರು ಏನೆಂದು ಪ್ರಶ್ನಿಸಲಾಗಿ. ಸಾಕ್ಷಿ ಮಗನ ಹೆಸರು ಗಿರಿಬಾಬು ಮತ್ತು ಹೆಂಡತಿಯ ಹೆಸರು ಲಕ್ಷ್ಮಮ್ಮ ಎಂದು ನುಡಿಯುತ್ತಾರೆ.

ನಿಪಿ-8 ಯಾವಾಗ ಬೇಕಮ್ಮ ತೆಗೆದುಕೊಂಡಿರುತ್ತಾರೆಂದು ಹೇಳಲು ಆಗುವುದಿಲ್ಲ. ಸಾಕ್ಷಿಗೆ ಒಂದು ಆದಾರ್ ಕಾರ್ಡ್ ನ್ನು ತೋರಿಸಿ ಅದರಲ್ಲಿರುವ ಪೋಟೋ ಯಾರದ್ದು ಎಂದು ಪ್ರಶ್ನಿಸಲಾಗಿ ಸಾಕ್ಷಿ ಪೋಟೋ ಮಾತ್ರ ಬೇಕಮ್ಮದು ಎಂದು -6-

ನುಡಿಯುತ್ತಾರೆ. ಸದರ ಆದಾರ್ ಕಾರ್ಡ್ ನ್ನು ನಿಡಿ1 ಎಂದು ಗುರುತಿಸಲಾಯಿತು. ನನಗೆ ಈಗ ತೋರಿಸಿದ ಐಡಿ ಕಾರ್ಡ್ ಬೇಕಮ್ಮಳದು ಆಗಿರುವುದಿಲ್ಲ.

ನಿಪಿ 8 ಫೇಕ್?ಆದಾರ್ ಕಾರ್ಡ್ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ 8 ನ್ನು ಸೃಷ್ಟಿ ಮಾಡಿ ಈ ಕೇಸಿನ ಸಲುವಾಗಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ನಿಪಿ 1 ಮತ್ತು 2 ನ್ನು ಈ ಕೇಸಿನ ಸಲುವಾಗಿ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ಬೇಕಮ್ಮ ಆಗಸ್ಟ್2010 ರಲ್ಲಿ ಮರಣ ಹೊಂದಿರುತ್ತಾರೆ.

ಅಸಲು ದಾವೆ ಹಾಕಿದ ವಿಚಾರ ನಮಗೆ 2003 ರಿಂದಲೆ ಗೊತ್ತಿತ್ತು ಎನ್ನುವುದು ಸರಿಯಲ್ಲ. ಕೇಸಿನ ವಿಚಾರ ಯಾವಾಗ ಗೊತ್ತಾಯಿತು ಎಂದು ಪ್ರಶ್ನಿಸಲಾಗಿ ಸಾಕ್ಷಿ ಬೇಕಮ್ಮನಿಗೆ ನೋಟಿಸ್? ಬಂದಾಗಲೆ ಕೇಸಿನ ವಿಚಾರ ಗೊತ್ತಾಯಿತು ಎಂದು ನುಡಿಯುತ್ತಾರೆ.

ನಿಪಿ 4 ರಲ್ಲಿ ಮೃತನ ತಾಯಿಯ ಹೆಸರನ್ನು ನಮೂದಿಸದೆ ಇರುವ ಕಾರಣ ಸದರಿ ದಾಖಲೆ ಸೃಷ್ಟಿಮಾಡಿ ಹಾಜರುಪಡಿಸಿದ ದಾಖಲೆ ಆಗಿರುತ್ತದೆ ಎನ್ನುವುದು ಸರಿಯಲ್ಲ. ನಿಪಿ 5 ರಲ್ಲಿ ಇರುವ ಎಡಗೈ ಹೆಬ್ಬೆಟ್ಟಿನ ಗುರುತು ಬೇಕಮ್ಮನದಲ್ಲ ಎನ್ನುವುದು ಸರಿಯಲ್ಲ. ನಿಪಿ 5 ನ್ನು ಸಹ ದಾವೆಯ ಸಲುವಾಗಿ ಸೃಷ್ಟಿಮಾಡಿರುವುದು ಎನ್ನುವುದು ಸರಿಯಲ್ಲ.

ನನ್ನ ತಾಯಿ ಸರಸ್ವತಮ್ಮ 2013 ಅಗಸ್ಟ್ ರಂದು ಮರಣ ಹೊಂದಿರುತ್ತಾರೆ. ನಿಮ್ಮ ತಾಯಿ ಮರಣ ಹೊಂದಿದ ನಂತರ ನಿಪಿ 6 ನ್ನು ಸೃಷ್ಟಿಮಾಡಿ

ಹಾಜರುಪಡಿಸಿರುತ್ತೇವೆನ್ನುವುದು ಸರಿಯಲ್ಲ. ನಿಪಿ 6 ರಲ್ಲಿರುವ ಪೋಟೊ ವನ್ನು ಸಹ ಗ್ರಾಪಿಕ್? ನಲ್ಲಿ ಸೃಷ್ಟಿ ಮಾಡಿರುತ್ತೆವೆನ್ನುವುದು ಸರಿಯಲ್ಲ. ನಾನು ಹಾಜರುಪಡಿಸಿದ ದಾಖಲಾತಿಗಳು ಬೇಕಮ್ಮಳಿಗೆ ಸಂಬಂಧಿಸಿದಲ್ಲ ಎನ್ನುವುದು ಸರಿಯಲ್ಲ. ನಾನು ಹಾಜರುಪಡಿಸಿದ ಆದಾರ್?ಕಾರ್ಡ್ ಲಕ್ಷ್ಮಮ್ಮ ಮತ್ತು ಅವರ ಗಂಡ ಕಾರ್ಮೆಟ್?ನಾಯ್ಡು ರವರಿಗೆ ಸಂಬಂಧಿಸಿದ್ದು ಎನ್ನುವುದು ಸರಿಯಲ್ಲ. ನಾನು ಬೇಕಮ್ಮನ ವಾರಸುದಾರರಲ್ಲ ಎನ್ನುವುದು ಸರಿಯಲ್ಲ. ನನಗೂ ಆಸ್ತಿಗೂಯಾವುದೆ ಸಂಬಂದ ಇಲ್ಲದೆ ಇದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗಳು ಮೇಲಿನ ಪಾಟೀ ಸವಾಲು ಅಳವಡಿಸಲು ಅನುವುತಿಸಿರುತ್ತಾರೆ, ಅನುಮತಿಸಲಾಯಿತು.

ಮರು ವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್?ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.